ಮಗನಿಗೆ ಸಿದ್ಧಿ ವಿನಾಯಕನನ್ನು ಅಪಭ್ರಂಶಗೊಳಿಸಿ ಸಿದ್ವಿನ್ ಎಂದು ಹೆಸರಿಟ್ಟಿದ್ದಾನೆ ಗೊತ್ತಾ' ಎಂದು ನನ್ನನ್ನು ಮತ್ತಷ್ಟು ಚಕಿತಗೊಳಿಸಿದರು.

ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟು ಮಾಡ್ರನ್ ಹೆಸರಿಡೋ ಹಾವಳಿ ಈಗ ಎಲ್ಲಾ ಕಡೆ ಹಬ್ಬಿ ನಿಂತಿದೆ. ಶಾಲೆಗೆ ಪ್ರತಿ ವರ್ಷ ದಾಖಲಾಗುವ ಮಕ್ಕಳ ಹೆಸರುಗಳಲ್ಲಿ ಕನಿಷ್ಠ ಹತ್ತಾದರೂ ನಾವು ಇದುವರೆಗೆ ಕೇಳಿರದ ವಿಚಿತ್ರ ಹೆಸರುಗಳಿರುತ್ತವೆ. ಕೆಲವಕ್ಕೆ ಅರ್ಥ ಮಕ್ಕಳ ಅಪ್ಪ–ಅಮ್ಮಂದಿರಿಗೆ ಗೊತ್ತಿದ್ದರೂ, ಎಷ್ಟೋಂದಕ್ಕೆ ಅರ್ಥವೇ ಗೊತ್ತಿರೋದಿಲ್ಲ. ಹುಟ್ಟಿದ ರಾಶಿ–ನಕ್ಷತ್ರಕ್ಕೆ ತಕ್ಕ ಹಾಗಿನ ಅಕ್ಷರದಿಂದ ಶುರುವಾಗೋ ಹೆಸರಿಡಲೇಬೇಕೆಂದು ತಲೆಕೆಡಿಸಿಕೊಳ್ಳುವವರೇ ಬಹಳ ಮಂದಿ. ಸಾಧಾರಣ ಒಳ್ಳೆಯ ಹೆಸರು ಇಡಲು ಸಾಧ್ಯವಾಗುವ ಅಕ್ಷರದ ನಕ್ಷತ್ರದಲ್ಲಿ ಮಗು ಹುಟ್ಟಿದ್ದರೆ ಬಚಾವ್. ಅಕಸ್ಮಾತ್ ಡಿ, ಟಿ, ಡ ಅಂತೆಲ್ಲ ಅಕ್ಷರಗಳಿಂದ ಶುರುವಾಗುವ ಹೆಸರಿಡಬೇಕಾಗಿ ಬಂದರೆ ಮಾತ್ರ ದೇವ್ರೇ ಗತಿ. ಹಾಗಾಗಿ ಡಿಕ್ಕಿರಾಜ, ಡೆಟ್ರಾನ್, ಡಿಂಪನ, ಡಿಕ್ಷಿತ್, ಡಿಷ್ಮ, ಡಾನ್, ಟೆನ್ನಿಸ್ ಕುಮಾರ್ ಅಂತೆಲ್ಲ ಹೆಸರಿಟ್ಟುಕೊಂಡಿರೋ ಮಕ್ಕಳನ್ನು ನೋಡಿದ್ದೇನೆ. ಒಮ್ಮೆಯಂತೂ ಬಾಡಿಗೆ ಮನೆ ಹುಡುಕುವಾಗ ಬಡಾವಣೆಯಿಂದ ಬಡಾವಣೆಗೆ ಅಲೆವಾಗ ಒಂದು ಮನೆಯ ಮುಂದೆ ನೇಮ್ ಪ್ಲೇಟ್ ಮೇಲೆ ಟಾಸ್ಕರ್ ಅನ್ನೋ ಹೆಸರಿದ್ದಿದ್ದು ನೋಡಿ ನಿಬ್ಬೆರಗಾಗಿದ್ದೆ. ಕೆಲವರು ಮಾತ್ರ ಹುಟ್ಟಿದ ಹೆಸರು, ರಾಶಿ–ನಕ್ಷತ್ರದ ಪ್ರಕಾರ ಇಟ್ಟು ಶಾಲೆಗೆ ಸೇರಿಸುವಾಗ ಯಾವುದಾದರೂ ಚಂದದ ಹೆಸರು ಕೊಟ್ಟು ತಮ್ಮ ಮಕ್ಕಳನ್ನು ಬಚಾವ್ ಮಾಡುತ್ತಾರೆ.



ಈಗೀಗ ಜನ ಮಕ್ಕಳು ಮಾಡಿಕೊಳ್ಳೋದೇ ಒಂದು ಇಲ್ಲವೇ ಎರಡು. ಹಾಗಾಗಿ ಅವರವರ ಮಕ್ಕಳು ಅವರಿಗೆ ಇಂದ್ರ ಚಂದ್ರರೇ. ಅಂಥ ಅಮೂಲ್ಯ ಮಕ್ಕಳಿಗೆ ಹೇಗೆಹೇಗೋ ಹೆಸರಿಡಲು ಸಾಧ್ಯವೇ!

ಕೆಲವರಂತೂ ಹೆಸರಿಡುವ ಕಾರ್ಯ ತಮ್ಮ 'ಹೆಚ್‌ಸಿಜಿ' ಟೆಸ್ಟ್‌ನ ಕಡ್ಡಿ ಕೆಂಪಾದ ತಕ್ಷಣವೇ ಶುರು ಮಾಡಿಬಿಡ್ತಾರೆ. ತಮ್ಮ ವಿಶಿಷ್ಟ, ಅಪ್ರತಿಮ, ಅಮೋಘ ಪ್ರತಿಭೆಯ ಮಗುವಿಗೆ ಏನೇನೋ ಹಳೆಯ ಕಾಲದ ಹೆಸರಿಡಲು ಸಾಧ್ಯವೇ! ಅದಾಗದು ಬಿಡಿ. ಅಂದಹಾಗೆ, ಈ ವಿಶಿಷ್ಟ, ಅಪ್ರತಿಮ, ಅಮೋಘ ಅನ್ನುವವು ಕೂಡ ನಾನು ಕೇಳಿರುವ ಹೆಸರುಗಳೇ. ಸರಿ, ಮಗು ಹುಟ್ಟೋ ಮುಂಚೆಯೇ ಅಂತರ್ಜಾಲವನ್ನೆಲ್ಲಾ ಜಾಲಾಡಿ, ಕನ್ನಡ ನಿಘಂಟುಗಳನ್ನೆಲ್ಲ ಒಂದು ಪುಟವೂ ಬಿಡದಂತೆ ಹುಡುಕಿ, ಕನ್ನಡ ಪಂಡಿತರನ್ನು ಭೇಟಿ ಮಾಡಿ ಪರಾಮರ್ಶಿಸಿ, ಕೊನೆಗೆ ತಮ್ಮ ಕುಟುಂಬದಲ್ಲೇ ಆಗಲಿ, ಸ್ನೇಹಿತರ ಬಳಗದಲ್ಲಿಯಾಗಲಿ ಯಾರೂ ಇದುವರೆಗೆ ಇಟ್ಟಿರದಂತಹ ಹೆಸರು ಸಿಕ್ಕಿಬಿಟ್ಟರೆ ಅದೇ ದೊಡ್ಡ ಪುಣ್ಯ.

ನಿಮಗೆ ಇನ್ನೂ ಹೊಸ ಹೊಸ ಹೆಸರುಗಳು ಬೇಕು ಅಂದರೆ ಟೀವಿಯಲ್ಲಿನ ಯಾವುದಾದರೂ ಒಂದು ಫೋನ್ ಇನ್ ಕಾರ್ಯಕ್ರಮ ನೋಡಿ. ಹೀಗೆ ಭವಿಷ್ಯ ಹೇಳುವ ಸ್ವಾಮೀಜಿಯೊಬ್ಬರ ಫೋನ್ ಇನ್ ಕಾರ್ಯಕ್ರಮ ನೋಡ್ತಾ ಕೂತಿದ್ದೆ. ಅದರಲ್ಲಿ ಒಬ್ಬ ಮಹಿಳೆ ಕರೆ ಮಾಡಿ, ತನ್ನ ಮಗಳ ಭವಿಷ್ಯದ ಬಗ್ಗೆ ಚಿಂತಾಕ್ರಾಂತಳಾಗಿ ಕೇಳಿದಳು. ಸ್ವಾಮೀಜಿ, 'ಮಗುವಿನ ಹೆಸರು ಹೇಳಿ' ಎಂದಾಗ ಆ ಮಹಿಳೆ, 'ಆಲಸ್ಯ' ಎಂದಾಗ ಮಾತ್ರ ನಗು ತಡೆಯಲಾಗಲಿಲ್ಲ. 'ಆಲಸ್ಯ ಅಂತ ಹೆಸರಿಟ್ಟುಬಿಟ್ಟು ಮಗು ಚುರುಕಾಗಿಲ್ಲ ಅಂದ್ರೆ ಏನಮ್ಮ' ಅಂತ ಸ್ವಾಮೀಜಿಯೂ ನಗು ತಡೆಯಲಾರದೆ ನಕ್ಕರು.

ನನ್ನ ಗೆಳತಿಯೊಬ್ಬಳ ಮಗಳಿಗೆ 'ರಿ' ಅನ್ನೋ ಅಕ್ಷರದಲ್ಲೇ ಹೆಸರಿಡಬೇಕೆಂದು ಭಟ್ಟರು ಸೂಚಿಸಿಬಿಟ್ಟರು. ಇವಳ ಹುಡುಕಾಟ ಶುರುವಾಯಿತು. ರಿಷಿತ, ರೀಮಾ, ರೀತಾ ಅಂತೆಲ್ಲಾ ಹೆಸರುಗಳು ಸಿಕ್ಕರೂ ಅವಳಿಗೆ ಒಪ್ಪಿಗೆಯೇ ಇಲ್ಲ. 'ಇವೆಲ್ಲ ಹಳೆಯದಾಯಿತು, ಬೇಡ' ಅನ್ನೋ ರಾಗ ಬೇರೆ. ಇವಳ ಹುಡುಕಾಟ ನೋಡಿ ನೋಡಿ ಸಾಕಾದ ಅವರಮ್ಮ, 'ಲೇ, ಸುಮ್ಮನೆ ರಿನ್ ಅಂತ ಹೆಸರಿಟ್ಟುಬಿಡು, ಇಲ್ಲಿಯವರೆಗೆ ಯಾರೂ ಇಟ್ಟಿಲ್ಲ, ಮುಂದೆಯೂ ಯಾರೂ ಇಡಲ್ಲ' ಅಂತ ಅಣಕಿಸಿದ ಮೇಲೆ ಹೊಟ್ಟೆ ತುಂಬಾ ನಕ್ಕು 'ರಿಷಿತ' ಅನ್ನೋ ಹೆಸರಿಟ್ಟು ತೆಪ್ಪಗಾದಳು.

ವಿಶಿಷ್ಟ ಹೆಸರಿಡಬೇಕು ಅನ್ನೋ ಗುಂಗಿಗೆ ಬಿದ್ದು ನಮ್ಮ ಊರಲ್ಲಿರುವ ನನ್ನ ಸೋದರಮಾವ ತನ್ನ ಮಗಳಿಗೆ ವಿಸ್ಮೃತಿ ಎಂದು ಹೆಸರಿಟ್ಟುಬಿಟ್ಟಿದ್ದರು. 'ವಿಸ್ಮೃತಿ ಎಂದರೆ ಮರೆವು ಎಂದರ್ಥ, ಅದೆಲ್ಲಿ ಹುಡುಕಿದೆ ಮಾವಾ ಈ ಹೆಸರು' ಎಂದು ನಾನು ಬೆರಗಿನಿಂದ ಕೇಳಿದರೆ, 'ಅಯ್ಯೋ ನೀನೇ ಹೇಳ್ಕೊಟ್ಟಿದ್ದಲ್ವ' ಅಂತ ಬಾಣ ನನ್ನ ಕಡೆಯೇ ತಿರುಗಿಸಿಬಿಟ್ಟರು. ನಾನು ತಲೆ ಚಚ್ಚಿಕೊಂಡು ಸುಮ್ಮನಾಗಿದ್ದೆ. ಅವಳ ಹೆಸರು ಕೇಳಿದವರು ಉಚ್ಚರಿಸಲು ಕಷ್ಟಪಡುವುದು ನೋಡಿ ನನ್ನ ಮಾವನಿಗೆ ಹೆಮ್ಮೆ ಮತ್ತು ನಗು. ಆದರೆ ಒಮ್ಮೆ ನಮ್ಮಜ್ಜಿ ಯಾರದೋ ಬಳಿ ಮಾತನಾಡುವಾಗ, 'ಅಯ್ಯೋ ನಮ್ ವೆಂಕ್ಟೇಶ ತನ್ ಮಗ್ಳಿಗೆ ಅದೇನೋ



ಕಿಶ್ಮು ಮೂರ್ತಿ ಅಂತ ಹೆಸರಿಟ್ಟವ್ನೆ' ಅನ್ನೋದು ಕೇಳಿ ನಮ್ಮಾವನ ಉತ್ಸಾಹ ಜರ್ರನೆ ಇಳಿದು ಹೋಯ್ತು. ನಂತರ ಸಾಕಷ್ಟು ವಿಚಾರ ಮಾಡಿ ವಿಸ್ಮೃತಿಯನ್ನು ವಿಸ್ಮಿತ ಮಾಡಿದರು.

ನಮ್ಮ ಅಜ್ಜಿಯಂತೂ ಈ ಹೊಸ ರೀತಿಯ ಹೆಸರುಗಳ ಕರೆಯುವ ಚಂದ ಕೇಳಿಯೇ ತಣಿಯಬೇಕು. ನಾನು ಮತ್ತು ನನ್ನ ಕಸಿನ್‌ಗಳೆಲ್ಲ ನಮ್ಮ ಮಕ್ಕಳಿಗೆ ಹೆಸರಿಡುವ ಮುನ್ನ 'ಈ ಹೆಸರುಗಳು ನಮ್ಮಜ್ಜಿ ಕರೆಯುವಾಗ ಏನಾಯ್ತವೋ' ಅಂತ ಸಾಕಷ್ಟು ಚರ್ಚೆ ಮಾಡಿ, ಆ ಹೆಸರುಗಳು ಪಡೆಯಬಹುದಾದ ರೂಪಾಂತರಗಳನ್ನೆಲ್ಲ ಊಹಿಸಿ ಹುಷಾರಾಗಿ ಹುಡುಕುತ್ತಿದ್ದೆವು. ಎಷ್ಟೇ ಎಚ್ಚರ ವಹಿಸಿದರೂ ಸಂಜನಾ 'ಚೆಂಜನ' ಆಗಿ, ವಿಹಾನ 'ವಿಮಾನ' ಆಗಿ ನಮ್ಮ ಶ್ರಮವೆಲ್ಲಾ ಮಣ್ಣು ಮುಕ್ಕಿತ್ತು.

ಒಮ್ಮೆಯಂತೂ ಊರಲ್ಲಿ ನಮ್ಮ ಮನೆ ಎದುರಿಗೆ ಇದ್ದ ಚಂದ್ರ ನಂದಿನಿ ಎನ್ನುವ ಚಂದದ ಹೆಸರಿನ ಹುಡುಗಿಯನ್ನು ಜಗಳವಾಡುವಾಗ ಮಕ್ಕಳು 'ಹೋಗೇ ಹಂದಿ' ಎಂದು ಕರೆದು, ಆ ಹುಡುಗಿ ಅತ್ತು ಕರೆದು ರಂಪ ಮಾಡಿ, 'ಇವತ್ತೇ ನನ್ನ ಹೆಸರು ಬೇರೆ ಇಡಿ' ಎಂದು ಅವರಮ್ಮ ಅಪ್ಪನಿಗೆ ಹುಟ್ಟಿದ ದಿನ ಕಾಣಿಸಿದ್ದಳು.

ಕಾಲೇಜು ಓದುವಾಗ ನಮ್ಮ ಕೆಮಿಸ್ಟ್ರಿ ಮೇಡಂ ಒಬ್ಬರು ತಮ್ಮ ಮಗಳಿಗೆ 'ಆಲ್ಫಾ' ಎಂದು ಹೆಸರಿಟ್ಟಿದ್ದರು. ತಗೋ ತರ್ಲೆ ಹುಡುಗರು ಮೇಡಂ ಓಡಾಡುವಾಗೆಲ್ಲ 'ಇನ್ನು ಬೀಟಾ, ಗಾಮಾ, ಡೆಲ್ಟಾ ಎಲ್ಲಾ ಲೈನ್‌ನಲ್ಲಿವೆ ಅಂತ ಕಾಣುತ್ತೆ' ಎಂದೆಲ್ಲ ರೇಗಿಸಿ ಚೆನ್ನಾಗಿ ಗೋಳು ಹೊಯ್ದುಕೊಂಡಿದ್ದರು.

ಹೆಸರು ನವನವೀನವಾಗಿದ್ದರೂ ಆಗದಿದ್ದರೂ ಹೆತ್ತವರಿಗೆ ತಮ್ಮ ತಮ್ಮ ಮಕ್ಕಳು ಮುದ್ದೇ ತಾನೇ. ಹಾಗಂದುಕೊಂಡು ಒಂದು ಸರಳ ಸುಂದರ ಹೆಸರಿಟ್ಟರೆ ಸಮಯ–ಶ್ರಮ ಎರಡೂ ಉಳಿಯುವುದು. ಈಗಿನ ಆಧಾರ್ ಸಂಖ್ಯೆ, 'ಎಸ್ ಎ ಟಿ ಎಸ್' ಸಂಖ್ಯೆಗಳಿಂದ ಮಕ್ಕಳನ್ನು ಗುರುತಿಸುವುದನ್ನು ನೋಡಿದರೆ, ಮುಂದೊಂದು ದಿನ ಮನುಷ್ಯರೆಲ್ಲರನ್ನೂ ಕೇವಲ ಸಂಖ್ಯೆಗಳು ಇಲ್ಲವೇ ಕೋಡ್‌ಗಳಿಂದ ಮಾತ್ರ ಗುರುತಿಸುವ ಕಾಲ ಬರಬಹುದೇ?